# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | : ಶ್ರೀಮತಿ ಹೇಮಲತಾ ನಾಯಕ್., (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : 968 |
| ಉತ್ತರಿಸಬೇಕಾದ ದಿನಾಂಕ | : 20.08.2025 |
| ಉತ್ತರಿಸಬೇಕಾದ ಸಚಿವರು | : ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 10 ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಲಾಗಿರುವ ವಸತಿ ವಿನ್ಯಾಸಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು) | ಕಳೆದ 10 ವರ್ಷಗಳಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಕೊಪ್ಪಳ ಜಿಲ್ಲೆ ಡಿ.ಸಿ. ಆಫೀಸ್ ಹಿಂಭಾಗ ಒಟ್ಟು 46 ಎಕರೆ 29 ಗುಂಟೆ ಜಮೀನಿನಲ್ಲಿ ವಸತಿ ಯೋಜನೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. |
| ಆ | ಕೊಪ್ಪಳ ಜಿಲ್ಲೆಯಲ್ಲಿ ಮಂಡಳಿಯಿಂದ ಅಭಿವೃದ್ಧಿ ಮಾಡಿರುವ ವಸತಿ ಲೇಔಟ್‌ಗಳಲ್ಲಿನ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; ಹಂಚಿಕೆ ಮಾಡಲು ಬಾಕಿ ಇರುವ ನಿವೇಶನಗಳು ಎಷ್ಟು; ಬಾಕಿ ಉಳಿದಿರಲು ಕಾರಣವೇನು; (ವಿವರ ಒದಗಿಸುವುದು) | ಕಳೆದ 10 ವರ್ಷಗಳಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿರುವ ಕೊಪ್ಪಳ ಜಿಲ್ಲೆ ಡಿ.ಸಿ. ಆಫೀಸ್ ಹಿಂಭಾಗ ಬಡಾವಣೆಯಲ್ಲಿ ವಿವಿಧ ವರ್ಗದ ಒಟ್ಟು 426 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. 173 ನಿವೇಶನಗಳು ಖಾಲಿ ಉಳಿದಿದ್ದು, ಸದರಿ ನಿವೇಶನಗಳನ್ನು ಹಂತ ಹಂತವಾಗಿ ಹಂಚಿಕೆ ಮಾಡಲಾಗುತ್ತಿದೆ. |
| ಇ | ಈಗಾಗಲೇ ಹಂಚಿಕೆ ಮಾಡಿರುವ ಲೇಔಟ್ ಗಳಲ್ಲಿನ ಎಲ್ಲಾ ಸಾರ್ವಜನಿಕ ಮೂಲ ಸೌಕರ್ಯಗಳನ್ನು (ರಸ್ತೆ, ಪಾರ್ಕ್, ಸಿ.ಎ ಸೈಟ್ ಹಾಗೂ ಇತ್ಯಾದಿ) ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆಯೇ; (ಹಾಗಿದ್ದಲ್ಲಿ ವಿವರ ಒದಗಿಸುವುದು) ಇಲ್ಲದಿದ್ದಲ್ಲಿ ಬಾಕಿ ಇರಲು ಕಾರಣವೇನು; | 2015-16 ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಕೊಪ್ಪಳ ಜಿಲ್ಲೆ ಡಿ.ಸಿ. ಆಫೀಸ್ ಹಿಂಭಾಗ ಒಟ್ಟು 46 ಎಕರೆ 29 ಗುಂಟೆ ಜಮೀನಿನಲ್ಲಿ ವಸತಿ ಯೋಜನೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಸದರಿ ಬಡಾವಣೆಯನ್ನು ನಗರ ಸಭೆಗೆ ಹಸ್ತಾಂತರಿಸಲು ಕ್ರಮ ವಹಿಸಲಾಗುತ್ತಿದೆ. |
| ಈ | ಈಗಾಗಲೇ ಹಂಚಿಕೆ ಮಾಡಿರುವ ನಿವೇಶನಗಳ ಭೂ ಮಾಲೀಕರುಗಳಿಗೆ ಆಯಾ ನಗರ ಸ್ಥಳೀಯ ಸಂಸ್ಥೆಗಳಿಂದ ನಮೂನೆ-3 ನೀಡಲಾಗುತ್ತಿದೆಯೇ; ಇಲ್ಲವಾದಲ್ಲಿ ಅದಕ್ಕೆ ಕಾರಣವೇನು; (ವಿವರ ಒದಗಿಸುವುದು) | ಸದರಿ ಬಡಾವಣೆಯನ್ನು ನಗರ ಸಭೆಗೆ ಹಸ್ತಾಂತರಿಸಲು ಕ್ರಮವಹಿಸಲಾಗಿದ್ದು, ಹಸ್ತಾಂತರವಾಗದ ಕಾರಣ ನಿವೇಶನಗಳ ಮಾಲೀಕರುಗಳಿಗೆ ನಗರಸಭೆಯಿಂದ ನಮೂನೆ 3 ನೀಡಲಾಗುತ್ತಿಲ್ಲ. |
| ಉ | ಕೆಹೆಚ್‌ಬಿಯ ಲೇಔಟ್‌ಗಳಲ್ಲಿನ ಎಲ್ಲಾ ಸಾರ್ವಜನಿಕ ಸೌಕರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಬಾಕಿ ಇರುವ ಪ್ರಕರಣಗಳನ್ನು ಯಾವ ಅವಧಿ ಒಳಗಾಗಿ ಹಸ್ತಾಂತರಿಸಲಾಗುವುದು (ವಿವರ ಒದಗಿಸುವುದು) | ಸದರಿ ಬಡಾವಣೆಯನ್ನು ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸಿಕೊಳ್ಳಲು ನಗರ ಸಭೆಗೆ ಈಗಾಗಲೇ ಕೋರಲಾಗಿರುತ್ತದೆ. |

ಸಂಖ್ಯೆ: ವಇ 165 ಕೆಹೆಚ್‌ಬಿ 2025

(ಬಿ.ಜೆಡ್ ಜಮೀರ್ ಅಹ್ಮದ್ ಖಾನ್)
ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು